**ಪ್ರಧಾನ ಮಂತ್ರಿಗಳ ಮಾರಿಷಸ್ ಭೇಟಿ (ಮಾರ್ಚ್ 11-12, 2025)**

ಮಾರ್ಚ್ 07, 2025

ಮಾರಿಷಸ್ ಪ್ರಧಾನಮಂತ್ರಿ ಶ್ರೀ ನವೀನ್‌ಚಂದ್ರ ರಾಮಗುಲಂ ಅವರ ಆಹ್ವಾನದ ಮೇರೆಗೆ ಮಾರ್ಚ್ 12 ರಂದು ಮಾರಿಷಸ್‌ನ ರಾಷ್ಟ್ರೀಯ ದಿನಾಚರಣೆ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಲು ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರು 2025 ರ ಮಾರ್ಚ್ 11 ರಿಂದ 12 ರವರೆಗೆ ಮಾರಿಷಸ್ ರಾಷ್ಟ್ರ ಭೇಟಿ ಮಾಡಲಿದ್ದಾರೆ. ಭಾರತೀಯ ನೌಕಾಪಡೆಯ ಹಡಗಿನೊಂದಿಗೆ ಭಾರತೀಯ ರಕ್ಷಣಾ ಪಡೆಯ ತುಕಡಿಯೊಂದು ಆಚರಣೆಗಳಲ್ಲಿ ಭಾಗವಹಿಸಲಿದೆ.  2015 ರಲ್ಲಿ ಕೊನೆಯದಾಗಿ ಪ್ರಧಾನಿ ಮಾರಿಷಸ್‌ಗೆ ಭೇಟಿ ನೀಡಿದ್ದರು.

2. ಭೇಟಿ ವೇಳೆ, ಪ್ರಧಾನಿಯವರು ಮಾರಿಷಸ್ ಅಧ್ಯಕ್ಷರನ್ನು, ಪ್ರಧಾನ ಮಂತ್ರಿಯವರನ್ನು ಭೇಟಿ ಮಾಡುತ್ತಾರೆ ಮತ್ತು ಮಾರಿಷಸ್‌ನ ಹಿರಿಯ ಗಣ್ಯರು ಮತ್ತು ರಾಜಕೀಯ ಪಕ್ಷಗಳ ನಾಯಕರೊಂದಿಗೆ ಸಭೆಗಳನ್ನು ನಡೆಸಲಿದ್ದಾರೆ. ಪ್ರಧಾನಮಂತ್ರಿ ಅವರು ಭಾರತೀಯ ಮೂಲದ ಸಮುದಾಯದ ಸದಸ್ಯರೊಂದಿಗೆ ಸಂವಾದ ನಡೆಸಲಿದ್ದಾರೆ ಮತ್ತು ಭಾರತದ ಅನುದಾನದ ಸಹಾಯದಿಂದ ನಿರ್ಮಿಸಲಾದ ನಾಗರಿಕ ಸೇವಾ ಕಾಲೇಜು ಮತ್ತು ಪ್ರದೇಶ ಆರೋಗ್ಯ ಕೇಂದ್ರವನ್ನು ಉದ್ಘಾಟಿಸಲಿದ್ದಾರೆ. ಭೇಟಿ ವೇಳೆ ಹಲವಾರು ತಿಳಿವಳಿಕೆ ಒಪ್ಪಂದಗಳನ್ನು (MoUs) ವಿನಿಮಯ ಮಾಡಿಕೊಳ್ಳಲಾಗುವುದು.

3. ಭಾರತ ಮತ್ತು ಮಾರಿಷಸ್ ಐತಿಹಾಸಿಕ, ಸಾಂಸ್ಕೃತಿಕ ಮತ್ತು ಜನರಿಂದ ಜನರ ನಡುವಿನ ಸಂಬಂಧಗಳಲ್ಲಿ ಬೇರೂರಿರುವ ನಿಕಟ ಮತ್ತು ವಿಶೇಷ ಸಂಬಂಧವನ್ನು ಹಂಚಿಕೊಳ್ಳುತ್ತವೆ. ಇದಲ್ಲದೆ, ಮಾರಿಷಸ್ ಭಾರತದ ವಿಷನ್ 'ಸಾಗರ್' ಅಂದರೆ ಸಾಗರ ಪ್ರದೇಶದಲ್ಲಿ ಎಲ್ಲರಿಗೂ ಭದ್ರತೆ ಮತ್ತು ಬೆಳವಣಿಗೆ ಇದರ ಪ್ರಮುಖ ಭಾಗವಾಗಿದೆ.

4. ಭೇಟಿಯು ಭಾರತ ಮತ್ತು ಮಾರಿಷಸ್ ನಡುವೆ ಇರುವ ಬಲವಾದ ಮತ್ತು ಶಾಶ್ವತ ಸಂಬಂಧವನ್ನು ಪುನರುಚ್ಚರಿಸುತ್ತದೆ ಮತ್ತು ಎಲ್ಲಾ ವಲಯಗಳಲ್ಲಿ ದ್ವಿಪಕ್ಷೀಯ ಸಂಬಂಧವನ್ನು ಹೆಚ್ಚಿಸಲು ಎರಡೂ ದೇಶಗಳ ಹಂಚಿಕೆಯ ಬದ್ಧತೆಯನ್ನು ಮತ್ತಷ್ಟು ಬಲಪಡಿಸುತ್ತದೆ.

ನವದೆಹಲಿ

ಮಾರ್ಚ್ 07, 2025